ತಾಂತ್ರಿಕ ಶಿಕ್ಷಣ ಇಲಾಖೆ

ಸಂ:ಡಿಟಿಇ/ಎನ್‌ಎಸ್‌ಎಸ್/03/ಅ.ಇ.ಕಾ/2012-13
08

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಅರಮನೆ ರಸ್ತೆ,
ಬೆಂಗಳೂರು
ದಿ:12.4.2017

## ಸುತ್ತೋಲೆ

ವಿಷಯ: **Life skills and counseling services ತರಬೇತಿಗೆ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರು ಹಾಗೂ ವಿಭಾಗಾಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.**

ಉಲ್ಲೇಖ **ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ನಿಮ್ಹಾನ್ಸ್/2016-17/418 ದಿ: 22.2.2017**

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಈಗಾಗಲೇ ಸರ್ಕಾರಿ ಪಾಲಿಟೆಕ್ನಿಕ್‌ಗಳು ಮಾನ್ಯತಾ ಮೌಲ್ಯಮಾಪನಕ್ಕೆ ತಯಾರಿ ನಡೆಸುತ್ತಿದ್ದು, ಸದರಿ ವಿಷಯಕ್ಕೆ ಅನುಕೂಲವಾಗುವಂತೆ ಅನುಬಂಧದಲ್ಲಿ ಸೂಚಿಸಲ್ಪಟ್ಟ ಸರ್ಕಾರಿ ಪಾಲಿಟೆಕ್ನಿಕ್‌ಗಳ ಕುಲಸಚಿವರು, ಅಧೀಕ್ಷಕರು ಹಾಗೂ ಸ್ವಇಚ್ಛೆಯುಳ್ಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (NIMHANS), ಬೆಂಗಳೂರು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯವರ ಸಹಯೋಗದಲ್ಲಿ **ದಿ: 17.4.2017 ರಿಂದ 22.4.2017 (6 ದಿನಗಳು)** ರವರೆಗೆ ನಡೆಸಲಾಗುತ್ತಿರುವ Life skills & Counseling Services (ಜೀವನ ಕೌಶಲ್ಯ) ತರಬೇತಿಗೆ ತಪ್ಪದೇ ಹಾಜರಾಗಲು ಸೂಚಿಸಲಾಗಿದೆ. ಈ ಮೂಲಕ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮೌಲ್ಯಮಾಪನಕ್ಕೆ ಒಳಪಡುವ ಸಂಸ್ಥೆಗಳಿಗೆ ಈ ತರಬೇತಿಯು ಉಪಯುಕ್ತವಾಗಿರುತ್ತದೆ ಎಂದು ಆಶಿಸಲಾಗಿದೆ. ಪ್ರಾಚಾರ್ಯರು ತಮ್ಮ ಸಂಸ್ಥೆಗಳ ಸಿಬ್ಬಂದಿಯವರ ವಿವರಗಳನ್ನು https://goo.gl/forms/4CZBoAZcrZ04Lolq1 (Google form) ಮೂಲಕ **ದಿನಾಂಕ: 14-4-2017ರ** ಒಳಗಾಗಿ ತಪ್ಪದೇ ಭರ್ತಿಮಾಡಿ ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ.

ಸದರಿ ತರಬೇತಿಯು ಬೆಂಗಳೂರಿನಲ್ಲಿರುವ NIMHANS, ಸಂಸ್ಥೆಯಲ್ಲಿಯೇ ಪ್ರಯಾಣ ಭತ್ಯೆ, ದಿನಭತ್ಯೆ, ವಸತಿ ಮತ್ತು ಊಟದ ವ್ಯವಸ್ಥೆಯೊಂದಿಗೆ ನಡೆಸಲಾಗುತ್ತಿರುವುದರಿಂದ ಭಾಗವಹಿಸುವವರು ಕಡ್ಡಾಯವಾಗಿ 6 ದಿನಗಳ ಕಾಲ ಅಲ್ಲಿಯೇ ಉಳಿದುಕೊಂಡು ತರಬೇತಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಪ್ರತಿ:-

1) ಸಂಬಂಧಪಟ್ಟ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಡಾ. ಪ್ರದೀಪ್ ಬಿ.ಎಸ್, ಪ್ರಧಾನ ಸಂಶೋಧಕರು, ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ, ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್, ಲಕ್ಕಸಂದ್ರ, ಬೆಂಗಳೂರು-560029 ಇವರ ಸೂಕ್ತ ಕ್ರಮಕ್ಕಾಗಿ
3) ರಾಜ್ಯ ಸಂಪರ್ಕಾಧಿಕಾರಿ, ರಾಷ್ಟ್ರೀಯ ಸೇವಾ ಯೋಜನೆ, ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರ ಮಾಹಿತಿಗಾಗಿ
4) ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ, ಬಸವನಗುಡಿ, ಬೆಂಗಳೂರು-560004 ಇವರ ಮಾಹಿತಿಗಾಗಿ
5) ಪ್ರಾಚಾರ್ಯರು, ಪಿ ಡಿ ಎ ಇಂಜಿನಿಯರಿಂಗ್ ಕಾಲೇಜು ಇವರು ಸದರಿ ಸಂಸ್ಥೆಯಿಂದ ನಾಲ್ಕು ಪ್ರಾಧ್ಯಾಪಕರುಗಳನ್ನು ನಿಯೋಜಿಸಲು ಸೂಚಿಸಲಾಗಿದೆ.
6) ಎಲ್ಲಾ ಜಂಟಿ ನಿರ್ದೇಶಕರುಗಳು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಇವರ ಮಾಹಿತಿಗಾಗಿ
7) ಇ-ಆಡಳಿತ, ಸಂಯೋಜಕರು, ಸೂಕ್ತ ಕ್ರಮಕ್ಕಾಗಿ
8) ಕಛೇರಿ ಕಡತಕ್ಕೆ

## ಅನುಬಂಧ

### ಜೀವನ ಕೌಶಲ್ಯ ತರಬೇತಿಗೆ ನಿಯೋಜಿಸಬೇಕಾದ ಪಾಲಿಟೆಕ್ನಿಕ್‌ಗಳ ಪಟ್ಟಿ

| ಕ್ರ ಸಂ. | ಸಂಸ್ಥೆಗಳು |
|---|---|
| 1 | ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು |
| 2 | ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು |
| 3 | ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ |
| 4 | ಡಿ.ಎ.ಸಿ.ಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು |
| 5 | ಶ್ರೀಮತಿ ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ |
| 6 | ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ |
| 7 | ಸರ್ಕಾರಿ ಪಾಲಿಟೆಕ್ನಿಕ್, ಕಲಬುರಗಿ |
| 8 | ಸರ್ಕಾರಿ ಪಾಲಿಟೆಕ್ನಿಕ್, ವಿಜಯಾಪುರ |
| 9 | ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ |
| 10 | ಸರ್ಕಾರಿ (ಸಿ.ಪಿ.ಸಿ) ಪಾಲಿಟೆಕ್ನಿಕ್, ಮೈಸೂರು |
| 11 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ |
| 12 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 13 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ |
| 14 | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು |
| 15 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ |
| 16 | ವಿ.ಐ.ಎಸ್.ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ |